ಎನ್ನತಕ್ಕಂಥದ್ದನ್ನು ಕಂಪ್ಯಾರಿಟೀವ್‌ಲಿ ಆರು ರಾಜ್ಯಪಾಲರ ಭಾಷಣಗಳನ್ನೂ ನಾನು ಓದಿದೆ. ಐದು ವರ್ಷಗಳಲ್ಲಿ ಆರನೇ ಭಾಷಣ ಇದು. ಆರು ಭಾಷಣಗಳನ್ನೂ ಓದಿದೆ. ಆರು ಭಾಷಣಗಳಲ್ಲಿಯೂ ಚರ್ವಿತ ಚರ್ವಣ, ಚರ್ವಿತ ಚರ್ವಣ. 1999 ನವೆಂಬರ್‌ನಲ್ಲಿಯೂ ಅದೆ, 2000ದಲ್ಲಿಯೂ ಅದೆ, 2001ರಲ್ಲಿಯೂ ಅದೆ, 2002–2003ರಲ್ಲಿಯೂ ಅದೆ, 2004ರಲ್ಲಿಯೂ ಅದೆ. ನಮ್ಮ ಸುದೈವ ಎಂದು ಕಾಣುತ್ತದೆ 2005ರಲ್ಲಿ ನಿಮಗೆ ಅದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕುಡಿಯುವ ನೀರು, ವಿದ್ಯುಚ್ಛಕ್ತಿಯ ವಿಚಾರದಲ್ಲಿ, ಕಬ್ಬಿನ ವಿಚಾರದಲ್ಲಿ ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ಕಂಟ್ರ್ಯಾಕ್ಟರ್‌ಗಳಿಗೆ ಕೊಡಬೇಕಾಗಿರತಕ್ಕಂತಹ ಬಾಕಿ ದುಡ್ಡಿನ ವಿಚಾರದಲ್ಲಿ, ಮಾನ್ಯ ಹನುಮೇಗೌಡರ ಭಾಷೆಯಲ್ಲಿ ಹೇಳಬೇಕೆಂದರೆ, ಅವರು ಸ್ವಲ್ಪ ಒರಟಾಗಿ ಹೇಳುತ್ತಾರೆ. ಅವರು ನೇರವಾಗಿ ಹೇಳುವವರು. ಆರೋಗ್ಯ ಸರಿ ಇಲ್ಲದೆ ಇರುವುದರಿಂದ ಮಾತನಾಡುತ್ತಿಲ್ಲ. ಬಾಯಿಯೇನೂ ಹೋಗಿಲ್ಲ. ಆರೋಗ್ಯ ಅಷ್ಟೆ. ನಿಮಗೆ ಪುಣ್ಯ ಎನ್ನುವುದು ಏನಾದರೂ ಬೇಕೆಂದರೆ ಈ ಕೆಲಸ ಮಾಡಿಕೊಂಡು ಹೋಗಿ ಎಂದು ಹೇಳಿ, ರಾಜ್ಯಪಾಲರ ವಂದನಾ ನಿರ್ಣಯದ ಭಾಷಣ ಏನಿದೆ, ಇದು ಸಂಸದೀಯ ವ್ಯವಹಾರಗಳ ದೃಷ್ಟಿಯಿಂದಾಗಿ ನಾವು ಇದನ್ನು ವಿರೋಧ ಮಾಡಲಿಕ್ಕಾಗುವುದಿಲ್ಲ. ಸಂಸದೀಯ ವ್ಯವಹಾರಗಳ ದೃಷ್ಟಿಯಿಂದಾಗಿ, ರಾಜ್ಯಪಾಲರು, ಮುಖ್ಯ ಮಂತ್ರಿಗಳು ಸದನ ಈ ದೃಷ್ಟಿಯಿಂದಾಗಿ ನಾನು ವಿರೋಧ ಮಾಡುವುದಿಲ್ಲ. ಆದರೆ ಅವರ ಬಾಯಿಯಿಂದ ಹೇಳಿಸಿರುವಂತಹ ಅಂಕಿ ಅಂಶಗಳು ಏನಿವೆ, ಇದು ಸತ್ಯಕ್ಕೆ ದೂರವಾಗಿರತಕ್ಕಂತಹ, ಕರ್ನಾಟಕ ರಾಜ್ಯದ ಜನತೆಗೆ ಮೋಸ ವಂಚನೆ, ದರೋಡೆ ಎಲ್ಲ ಕೂಡಿರತಕ್ಕಂತಹ ಆ ಶಬ್ದವೇ ನನ್ನ ಬಳಿ ಇಲ್ಲದೆ ಇರುವುದರಿಂದ ಇದೊಂದು ಬಹಳ ದೊಡ್ಡ ದರೋಡೆಯ ಮಾತುಗಳನ್ನು ನೀವು ಮಾತನಾಡಿದ್ದೀರಿ, ಇಷ್ಟಾದರೂ ಕೆಲಸಗಳನ್ನು ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಹೇಳಿ, ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಸಬ್ಸಿಡಿ ವಿಷಯದಲ್ಲಿ ಅವರು ಎರಡು ಮಾತುಗಳನ್ನು ಹೇಳಲಿಲ್ಲ.

ಛೇರ್ಮನ್ : ಮಾನ್ಯ ಶ್ರೀನಿವಾಸಗೌಡರೇ ದಯಮಾಡಿ ಕೂತುಕೊಳ್ಳಿ. ಒಂದು ಪ್ರಕಟಣೆ ಇದೆ. ಸ್ವಾಮಿ ನೀವು ದಯವಿಟ್ಟು ಕೂತುಕೊಳ್ಳಿ.

4) ಪ್ರಕಟಣೆ

ಛೇರ್ಮನ್ : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

> ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ 16.1.2004 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ ಎಂದು ತಿಳಿಸಿರುತ್ತಾರೆ. ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮೇಲಿನ ತಿದ್ದುಪಡಿ ವಿಧೇಯಕ 2004, ಕರ್ನಾಟಕ ಲಾಟರಿಗಳ ಮೇಲಿನ ತೆರಿಗೆ ವಿಧೇಯಕ 2004.